| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ರಾಜಕೀಯ ಪರಿಜ್ಞಾನವನ್ನು ಹೊಂದಿದ್ದ ಗೌರಮ್ಮನವರು ಗಾಂಧೀಜಿಯವರ ಬಗ್ಗೆ ಅಪರಿಮಿತವಾದ ಅಭಿಮಾನವನ್ನು ಹೊಂದಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ತೀವ್ರವಾದ ಆಸಕ್ತಿ ಹೊಂದಿದ್ದು ಖಾದಿ ಬಟ್ಟೆಗಳನ್ನು ಧರಿಸುತ್ತಿದ್ದರು. ಗಾಂಧೀಜಿಯವರ ಸ್ವಾತಂತ್ರ್ಯ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. | |
| 29. | "ಅರಿಯದ ಬಾಲಕನನ್ನು ಅಡ್ಡದಾರಿಗೆ ಎಳೆದು ಅವರ ಬದುಕನ್ನು ಹಾಳು ಮಾಡಿದಿರಿ" ಎಂದು ಕುಲಕರ್ಣಿಯು ಸೋಮಣ್ಣನಿಗೆ ಏಕೆ ಹೇಳಿದನು ?<br>***ಉತ್ತರ :***<br>ರಾಮಸಿಂಗನನ್ನು ಗುಂಡಿಕ್ಕಿ ಕೊಂದ ಕಲಕರ್ಣಿಯ ಕೃತ್ಯವನ್ನು ಸೋಮಣ್ಣನು ಖಂಡಿಸಿದನು. ಕೊಟ್ಟ ಕೂಳಿಗಾಗಿ ಸರಕಾರದ ಹಟವನ್ನು ನೀವು ನಡೆಸಿಕೊಡುವಾಗ ಭಾರತಮಾತೆಯ ಬಂಧವಿಮೋಚನೆಗೆ ನಿಲ್ಲುವುದರಲ್ಲಿ ಆ ಬಾಲಕನ ತಪ್ಪೇನಿದೆ. ಅವನನ್ನು ಹಿಡಿದು ಜೈಲಿಗೆ ಹಾಕುವುದನ್ನು ಬಿಟ್ಟು ಕೊಂದದ್ದು ಎಷ್ಟರಮಟ್ಟಿಗೆ ಸರಿ! ದುಶ್ಚಟಗಳಿಂದ ದೂರಾಗುವ, ಸ್ವಚ್ಛತೆಯ ಪಾಠ ಕಲಿಸುವ, ಅಜ್ಞಾನವನ್ನು ಹೋಗಲಾಡಿಸುವ ಆಜ್ಞೆಗಳನ್ನು ಕೊಟ್ಟಿದ್ದರೆ ಪಾಲಿಸುತ್ತಿದ್ದೆವು. ಪಾರತಂತ್ರ್ಯದ ಕೆಸರಿನಲ್ಲಿ ಕೊಳೆಯುತ್ತಲಿರಿ ಎಂಬ ನಿಮ್ಮ ಆಜ್ಞೆ ಹಿತಕರವಲ್ಲವೆಂದು ಸೋಮಣ್ಣ ವಿರೋಧಿಸಿದನು. ಆಗ ಕುಲಕರ್ಣಿಯು ಅರಿಯದ ಬಾಲಕನನ್ನು ಅಡ್ಡದಾರಿಗೆ ಎಲೆದು ಅವರ ಬದುಕನ್ನುಹಾಳು ಮಾಡಿದಿರಿ ಎಂದು ಹೇಳಿದನು. | |
| 30. | ಧೂರ್ತ ಶಿಲ್ಪಿಯೊಬ್ಬ ಧರ್ಮಪದನಿಗೆ ವಿಷ ಉಣಿಸಲು ಕಾರಣವಾದ ಅಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.<br>***ಉತ್ತರ :***<br>ಕಲಶವನ್ನು ಕೂರಿಸಿ ಜಯಬೇರಿ ಹೊಡೆದ ಧರ್ಮಪದನ ಮೇಲೆ ಅನೇಕ ಶಿಲ್ಪಿಗಳು ಕಣ್ಣಿಟ್ಟಿದ್ದಾರೆ. "ಇಷ್ಟು ಚಿಕ್ಕವಯಸ್ಸಿನಲ್ಲಿ ಎಂಥಾ ಪ್ರತಿಭೆ, ಅವನನ್ನು ಬೆಳೆಯಲು ಬಿಡಬಾರದು. ತಮ್ಮ ಸಾಧನೆ ಅವನ ಪ್ರತಿಭೆಯ ಮುಂದೆ ಸಣ್ಣದಾಗುವುದು ಬೇಡ. ಈಗಲೇ ಅವನನ್ನು ಮುಗಿಸಿಬಿಡಬೇಕು, ಇದು ತಕ್ಕ ಸಮಯ" ಎಂದು ಧೂರ್ತಶಿಲ್ಪಿಯೊಬ್ಬನು ತಾನು ತಂದಿದ್ದ ರೊಟ್ಟಿಗೆ ವಿಷ ಬೆರೆಸಿ ಉಣಿಸಲು ಯೋಚಿಸಿದನು. | |

